7

# ಬೈಬಲಿನ ಹೊರಗೆ ಪುರಾವೆಯಾದಂತೆ ಆತನ ಮಾನವತೆ

ಯೇಸುವಿನ ದೈವತ್ವದ ಬಗ್ಗೆ ಸವಿಸ್ತಾರವಾಗಿ ನೋಡಿದ್ದೇವೆ. ದೈವತ್ವದ ಬಗ್ಗೆ ನಾವು ಮಾತಾಡುವಾಗ, ದೇವರ ಬಗ್ಗೆ, ಅತಿಶ್ರೇಷ್ಠ ಜೀವಿಯ ಬಗ್ಗೆ ನಾವು ಮಾತಾಡುತ್ತೇವೆ. ದೇವರನ್ನು ವ್ಯಕ್ತಿತ್ವದಲ್ಲಿ ಗುರುತಿಸಲು ಬಯಸುವಾಗ ತಂದೆಯಾದ ದೇವರು, ಕುಮಾರನಾದ ದೇವರು ಹಾಗೂ ಪರಿಶುದ್ಧಾತ್ಮನಾದ ದೇವರು ಎಂದು ಮಾತಾಡುತ್ತೇವೆ. ಯೇಸುವನ್ನು ದೇವರ ಕುಮಾರನಂತೆ ನೋಡಿದ್ದೇವೆ. ಯೇಸುವು ನರಾವಾತಾರ ಹೊಂದಿದ ದೇವರು, ಶರೀರದಲ್ಲಿ ದೇವರು ಆಗಿದ್ದಾನೆ. ಡೊಸೆಸಿಸ್ಟರು ಯೇಸುವಿನ ಮಾನವತೆಯನ್ನು ತಿರಸ್ಕರಿಸಿದರು, ಯಾಕಂದರೆ ಅವರು, ದೇವರು (ಶುದ್ಧ ಆತ್ಮನು) ಅಶುದ್ಧ ಪ್ರಕೃತಿಯೊಂದಿಗೆ (ಶರೀರ) ಅಷ್ಟು ನಿಕಟವಾಗಿ ತನ್ನನ್ನು ಗುರುತಿಸಿಕೊಳ್ಳುವದಿಲ್ಲವೆಂದು ನಂಬಿದ್ದರು, ಅದು ಪಾಷಂಡ ಬೋಧನೆಯಾಗಿತ್ತು; ಅದು ಇನ್ನೂ ಹಾಗಯೇ ಇದೆ. ಇಂಥ ಎಲ್ಲಾ ಗಲಿಬಿಲಿ ಯಾಕೆ? ದೇವರು ರಕ್ಷಕನಾಗಿರುವದಿಲ್ಲವೇ? ಯೇಸುವು ಮಾನವನಾಗಿದ್ದಾನೆಂದು ಅರ್ಥಮಾಡಿಕೊಳ್ಳುವದಕ್ಕೆ ಅಷ್ಟು ಮುಖ್ಯವಾದದ್ದು ಯಾಕೆ ಆಗಿದೆ?

ಯೇಸುವಿನ ಮಾನವತೆಯು ದೇವರು ಮಾನವತೆಯನ್ನು ರಕ್ಷಿಸುವದಕ್ಕಾಗಿ ಶರೀರಧಾರಿಯಾದನು ಎಂಬ ಆಶ್ಚರ್ಯಕರವಾದ ತಿಳುವಳಿಕೆಗೆ ತರುತ್ತದೆ. ಪುರಾತನ ಸಮಯದಿಂದ ರಕ್ತದಲ್ಲಿ ಜೀವವಿದೆ ಎಂದು ಮನುಷ್ಯನು ಕಲಿಸಲ್ಪಟ್ಟಿದ್ದಾನೆ. ಪಾಪಗಳಿಗಾಗಿ ಯಜ್ಞದಲ್ಲಿ ರಕ್ತ ಸುರಿಸುವಿಕೆ ಬೇಕಾಗಿತ್ತು. ಆದಾಗ್ಯೂ ಪ್ರಾಣಿಗಳ ರಕ್ತವು ಪಾಪವನ್ನು ತೆಗೆದು ಹಾಕಲಾರದು (ಯಾಜಕಕಾಂಡ 17:11; ಇಬ್ರಿಯ 10:4). ಆದುದರಿಂದ, ನಮ್ಮನ್ನು ನಮ್ಮ ಪಾಪದ ಪರಿಸ್ಥಿತಿಯಿಂದ ರಕ್ಷಿಸಲ್ಪಡುವದಕ್ಕಾಗಿ, ಯಾವುದರಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಲು ಸಾಧ್ಯವಾದಂಥದ್ದರಿಂದ ರಕ್ಷಿಸಲು, ಕುಮಾರನಾದ ದೇವರು ಪರಿಪೂರ್ಣವಾದ, ಪಾಪ ರಹಿತ ಅರ್ಹತೆಯ ರಕ್ತ ಯಜ್ಞವನ್ನು ಅರ್ಪಿಸಿದನು. ಅದರ ಸಾಮರ್ಥ್ಯವು ಮಿತಿಯಿಲ್ಲದ್ದಾಗಿತ್ತು (ಇಬ್ರಿಯ 9:11-14), ಅದನ್ನು ಗುರುತಿಸಿರಿ, ಶಿಲುಬೆಯ ಮೇಲೆ ಸುರಿಸಿದ ರಕ್ತವು ಯಾವುದೋ ಒಂದು ರೀತಿಯ "ದೈವಿಕ" ರಕ್ತದ ಭಾಗವಾಗಿರಲಿಲ್ಲ. ಅದು ಮಾನವ ಜೀವಿಯ, ಮಾನವನ ಮರಣವಾಗಿತ್ತು. ಅದು ಅವಶ್ಯಕವಾದ ಯಜ್ಞವಾಗಿತ್ತು. ಕಡಿಮೆ ಬೆಲೆಯ ಯಜ್ಞವು ಸಾಕಾಗಿದ್ದರೆ ತಂದೆಯು ಇದಕ್ಕೆ ತನ್ನ ಕುಮಾರನನ್ನು ಒಳಪಡಿಸುತ್ತಿದ್ದನೋ? ಆದುದರಿಂದ, ಯೇಸುವಿನ ಮಾನವತೆಯನ್ನು ಅಲ್ಲಗಳೆಯುವುದು ನಮ್ಮ ಸ್ವಂತ ರಕ್ಷಣೆಯನ್ನು ಅಲ್ಲಗಳೆಯುವದಾಗಿದೆ. ಯೇಸುವಿನ ದೈವತ್ವವನ್ನು ಹಾಗೂ ಆತನ ಮಾನವತೆಯ ಮಹತ್ವವನ್ನು ಒತ್ತಿಹೇಳುವಾಗ, ಈಗ ನಾವು ಆತನ ಐತಿಹಾಸಿಕತೆಯನ್ನು ಮತ್ತು ಆತನ ಮಾನವತೆಯನ್ನು ದೃಢಪಡಿಸುವ ದಾಖಲೆಗಳ ಕಡೆಗೆ ತಿರುಗಿಕೊಳ್ಳುವೆವು.

ಕುಮಾರನಾದ ದೇವರ ಬಗ್ಗೆ ಬೈಬಲ್ ಏನು ಹೇಳುತ್ತದೆ ಎಂಬದರಲ್ಲಿ ನಾವು

ಪ್ರಾಥಮಿಕವಾಗಿ ಆಸಕ್ತರಾಗಿದ್ದೇವೆ. ಹಾಗಿದ್ದರೂ ಪ್ರಸಂಗಿಸಲು ಮತ್ತು ಬೋಧಿಸುವ ದಶಕಗಳಲ್ಲಿ, ಯೇಸುವಿನ ಅಸ್ತಿತ್ವದ ಬಗ್ಗೆ ಬೈಬಲಿನ ಹೊರಗೆ ಯಾವುದೇ ಪುರಾವೆಗ ಳಿರುವವೋ ಎಂಬುದಾಗಿ ಅನೇಕ ಪ್ರಶ್ನೆಗಳು ನನಗೆ ಕೇಳಲ್ಪಟ್ಟಿವೆ. ಕ್ಯಾಲಂಡರ ವರ್ಷವು ಲೋಕದಲ್ಲಿ ಯೇಸುವಿನ ಪ್ರಸನ್ನತೆಯಿಂದ ನಾವೆಲ್ಲರೂ ಪ್ರಭಾವಿತರಾಗಿರುವುದು ಒಂದು ದೃಷ್ಟಾಂತವಾಗಿದೆ.

ಪ್ರಶ್ನಿಸುವವರು ಸಾಹಿತ್ತಿಕ ಪುರಾವೆಯನ್ನು ಬಯಸುತ್ತಾರೆ. ಕ್ರಿಸ್ತನ ಜೀವಿತವನ್ನು ಕುರಿತು "ಬೈಬಲಿನ ಹೊರಗೆ" ಇರುವ ಪುರಾವೆಗಳ ಬಗ್ಗೆ ಆಶ್ಚರ್ಯ ಪಡುವವರ ಲಾಭಕ್ಕಾಗಿ ಸಮಯದ ಹಾವಳಿಗಳಲ್ಲಿ ಉಳಿದುಕೊಂಡ ಕೆಲವು ಲಿಖಿತ ಮೂಲಗಳನ್ನು ಸಂಕ್ಷೇಪವಾಗಿ ಹೇಳೋಣ. ಈ ದಾಖಲೆಗಳನ್ನು ನಾವು ವ್ಯಾಖ್ಯಾನಿಸುತ್ತಿದ್ದೇವೆ ಇಲ್ಲವೇ ಪರೀಕ್ಷಿಸುತ್ತಿದ್ದೇವೆ ಎಂದು ತಿಳಿಯ ಬೇಡಿರಿ. ಬೈಬಲಿನ ಹೊರಗೆ ನಮೂದಿಸಲ್ಪಟ್ಟ ಯೇಸುವಿನ ಪುರಾವೆಯಂತೆ ಮಾತ್ರವೇ ಅವುಗಳನ್ನು ನಾವು ಕೊಡುತ್ತಿದ್ದೇವೆ.

ಯೇಸುವು ಯೆಹೂದ್ಯರ ಮಧ್ಯದಲ್ಲಿ ಮಾತ್ರವೇ ಜೀವಿಸಿ, ಕಾರ್ಯ ಮಾಡಿದ ಯೆಹೂದ್ಯನಾಗಿದ್ದುದರಿಂದ, ಯೇಸುವು ಎಂದಾದರೂ ಜೀವಿಸಿದನು ಎಂಬುದನ್ನು ಅಲ್ಲಗಳೆಯುವ ಕಾರ್ಯವನ್ನು ಯಾವುದೇ ಯೆಹೂದಿ ಮೂಲವು ತೆಗೆದು ಕೊಳ್ಳು ವದಿಲ್ಲ. ಅದಕ್ಕೆ ವಿರುದ್ಧವಾಗಿ, ಬೈಬಲಿಗಿಂತ ಹೆಚ್ಚಾದ ಯೆಹೂದಿ ಮೂಲಗಳು ಆತನು ಜೀವಿಸದನು ಎಂಬುದನ್ನು ಸೂಚಿಸುತ್ತವೆ. ಉದಾಹರಣೆಯಾಗಿ ಕ್ರಿ.ಶ. ಮೊದಲನೆಯ ಶತಮಾನದ ಯೆಹೂದಿ *ಇತಿಹಾಸಕಾರನಾದ* ಜೊಸಿಫಸನು ತನ್ನ *Antiquities of the Jews* ಎಂಬುದರಲ್ಲಿ ಈ ಕೆಳಗಿನಂತೆ ದಾಖಲೆ ಮಾಡಿದ್ದಾನೆ.

> ಈ ಸಮಯದಲ್ಲಿ ಒಬ್ಬ ಜ್ಞಾನಿಯಾದ ಮನುಷ್ಯನು, ಯೇಸುವು ಬಂದನು. ನಾವು ಆತನನ್ನು ಮಾನವನೆಂದು ಕರೆಯುತ್ತೇವೆ. ಯಾಕಂದರೆ ಆತನು ವಿಸ್ಮಯವಾದ ಕಾರ್ಯಗಳನ್ನು ಮಾಡುವವನು (ಅದ್ಭುತ ಕಾರ್ಯಗಳು) ಆನಂದದಿಂದ ಸತ್ಯವನ್ನು ಸ್ವೀಕರಿಸುವ ಮನುಷ್ಯರಿಗೆ ಬೋಧಕನಾಗಿದ್ದನು. ಅನೇಕ ಯೆಹೂದ್ಯರನ್ನೂ ಅನೇಕ ಗ್ರೀಕರನ್ನೂ ಸಹ ನಡಿಸಿದನು. ಈ ಮನುಷ್ಯನು ಕ್ರಿಸ್ತನಾಗಿದ್ದನು.[1]

ರೋಮನ್ ಬರಹಗಾರರ ಪುರಾವೆಯು ಸಹ ಯೇಸುವು ನಿಜವಾಗಿಯೂ ಇತಿಹಾಸದ ವ್ಯಕ್ತಿಯಾಗಿದ್ದನೆಂಬುದನ್ನು ತೋರಿಸುತ್ತದೆ. ಟ್ಯಾಸಿಟಸನು ರೋಮನ್ ಇತಿಹಾಸಕಾರನಾಗಿದ್ದನು. ಶತಮಾನದ ತಿರುವಿನ ಮುಖಾಂತರ ಸುಮಾರು ಕ್ರಿ.ಶ. 120ರಲ್ಲಿ ಜೀವಿಸಿದನು. ಕ್ರಿ.ಶ. 64ರಲ್ಲಿ ಹೆಚ್ಚಾದ ರೋಮನ್ನು ನಾಶಪಡಿಸಿದ ಬೆಂಕಿಯ ಬಗ್ಗೆ ಅವನು ಬರೆದಾಗ, ಅವನು ರೋಮಿನಲ್ಲಿ ವಾಸಿಸಿದ ಕ್ರೈಸ್ತರ ಮೇಲೆ ಈ ಅವಘಡದ ದೂರನ್ನು ಹಾಕಲು ನೀರೋ ಪ್ರಯತ್ನಿಸಿದನು:

> ಪರಿಣಾಮವಾಗಿ, ವರದಿಯನ್ನು ತಪ್ಪಿಸಿ ಕೊಳ್ಳಲು (ಅವನು ರೋಮಿಗೆ ಬೆಂಕಿ ಹತ್ತಿಸಿದನೆಂದು ದೂರಿದಾಗ) ನೀರೋ ಅಪರಾಧವನ್ನು ಜನ ಸಾಮಾನ್ಯರಿಂದ ಕ್ರೈಸ್ತರೆಂದು ಕರೆಯಲ್ಪಟ್ಟ ತಮ್ಮ ಶಾಪಗ್ರಸ್ಥ ಕಾರ್ಯಗಳಿಗಾಗಿ ದ್ವೇಷಿಸಲ್ಪಟ್ಟ ಜನರನ್ನು ತೀಕ್ಷ್ಣವಾದ ಬಾಧೆಗಳಿಂದ ಪೀಡಿಸಿದನು. ಆತನ ಹೆಸರನ್ನು ಹೊಂದಿದಾತನಾದ ಕ್ರಿಸ್ತನು ತಿಬೇರಿಯನ ಆಳಿಕೆಯ ಸಮಯದಲ್ಲಿ ನಮ್ಮ ದೇಶಾಧಿಪತಿಯಾದ ಪೊಂತಿ ಪಿಲಾತನ ಹಸ್ತಗಳಿಂದ ಅತಿಶಯವಾದ ದಂಡನೆಯನ್ನು ಅನುಭವಿಸಿದನು ...[2]

ಯೆಹೂದಿ ಮತ್ತು ರೋಮನ್ ಮೂಲಗಳಿಂದ ಇತರ ಪುರಾವೆಯನ್ನು ಹೇಳ ಬಹುದಾಗಿದ್ದರೂ, ಇಲ್ಲಿ ಕೊಡಲ್ಪಟ್ಟವುಗಳು ನಮ್ಮ ಉದ್ದೇಶಗಳನ್ನು ಸಾಧಿಸಲು ಸಾಕಷ್ಟಾದವುಗಳಾಗಿವೆ. ಯೇಸುವು ನಿರ್ದಿಷ್ಟವಾದ ಸ್ಥಳದಲ್ಲಿಯೂ ಚರಿತ್ರೆಯ ನಿರ್ದಿಷ್ಟವಾದ ಸಮಯದ ಅವಧಿಯಲ್ಲಿಯೂ ಜೀವಿಸಿದ ಮನುಷ್ಯನಾಗಿದ್ದನು. ಇದು ಬೈಬಲಿನಿಂದ ಮತ್ತು ಸಾಮಾನ್ಯವಾಗಿ ಪುರಾತನ ಕ್ರೈಸ್ತ ಚಳವಳಕ್ಕೆ ವಿರೋಧವಾಗಿದ್ದ ಜನರಿಂದ ಬರೆಯಲ್ಪಟ್ಟ ಬೈಬಲಿನ ಹೊರಗಿನ ಸಾಹಿತ್ತಿಕ ಮೂಲಗಳಿಂದ ಸರಿಯೆಂದು ಸ್ಥಾಪಿಸಲ್ಪಟ್ಟಿದೆ. ಕೆಲವು ಮೂಲಗಳು ಟೀಕಾಕಾರರಿಂದ ವಿರೋಧಿಸಲ್ಪಟ್ಟಿದ್ದರೂ, ಬೈಬಲಿನ ಹೊರಗಿನ ಮೂಲಗಳಲ್ಲಿ ಯೇಸುವಿನ ಬಗ್ಗೆ ಮಾತಾಡಲ್ಪಟ್ಟಿದೆ ಎಂಬ ಸಂಗತಿಯು ಸ್ಥಿರಪಡಿಸಲ್ಪಟ್ಟಿದೆ. ಯೇಸುವು ನಿಜವಾಗಿಯೂ ಅಸ್ತಿತ್ವದಲ್ಲಿ ಇಲ್ಲದಿದ್ದರೆ ಇತರ ಐತಿಹಾಸಿಕ ವ್ಯಕ್ತಿಗಳೊಂದಿಗೆ ಸಂಬಂಧಿಸಿ ಯೇಸುವಿನ ಬಗ್ಗೆ ಜೊಸಿಫಸ್ ಮತ್ತು ಟ್ಯಾಸಿಟಸ್‌ರಂಥ ಬರಹಗಾರರು ಯಾಕೆ ಬರೆಯುತ್ತಿದ್ದರು?

“ನಿಜವಾದ ದೇವರೂ ನಿಜವಾದ ಮಾನವನೂ” ಎಂಬಂತೆ ಪುರಾತನ ವಿಶ್ವಾಸ ಪ್ರಮಾಣಗಳು ವಿವರಿಸಿರುತ್ತವೆ. ಇದು ಕ್ರೈಸ್ತ ವಿಶ್ವಾಸದ ತಳಹದಿಯೂ ತಿರುಳೂ ಆಗಿದೆ. ಕ್ರೈಸ್ತತ್ವವು ಅವಲಂಭಿಸಿದ ಸರ್ವೋಚ್ಛವಾದ ಸತ್ಯವು ಸುವಾರ್ತೆಯ ಪುರಾತನ ಘೋಷಣೆಯಿಂದ ಬಂದದ್ದಾಗಿರುತ್ತದೆ. ಅದು ಹಳೇ ಒಡಂಬಡಿಕೆಯ ವಿಷಯಗಳನ್ನು ಉಪಯೋಗಿಸಿತು. ಹಾಗೂ ಕ್ರಿ.ಶ. ಪ್ರಥಮ ಶತಮಾನದ ಕೊನೆಯ ಅರ್ಧಭಾಗದ ಮುಖಾಂತರವಾಗಿ ಕಂಡುಕೊಳ್ಳಲು ಮುಂದುವರಿದ ಪರಿಶುದ್ಧ ಬರಹದ ಅಧ್ಯಯನವನ್ನು ಉಪಯೋಗಿಸಿತು.

---

ಟಿಪ್ಪಣಿಗಳು

[1]Josephus *Antiquities* xviii.3.3.; quoted in Everett F. Harrison, *A Short Life of Christ* (Grand Rapids, Mich.: Wm. B. Eerdmans Publishing Co., 1968), 17.
[2]Tacitus *Annals* XV.44; quoted in Moses Hadas, ed., *The Complete Works of Tacitus*, Modern Library, trans. A. J. Church and W. J. Brodribb (New York: Random House, 1942), 380-81. See also C. Milo Connick, *Jesus: The Man, the Mission, and the Message,* 2d ed. (Englewood Cliffs, N.J.: Prentice-Hall, 1974), 59.

© 2009 Truth for Today